# ಪ್ರತಿ ಪಾತ್ರವೂ ಬೆಳವಣಿಗೆಯ ಮೆಟ್ಟಿಲು



**ಜಗನ್**
**ಕಲರ್ಸ್ ಕನ್ನಡ 'ಲಕ್ಷಣ'ದ ಭೂಪತಿ**

◆ **'ಲಕ್ಷಣ'ದಲ್ಲಿ ನಿಮ್ಮ ಪಾತ್ರದ ಮಹತ್ವ ಏನು?**

ನಿರ್ಮಾಪಕ, ನಿರ್ದೇಶನದ ಜೊತೆ ನಾಯಕನ ಪಾತ್ರವನ್ನೂ ನಿರ್ವಹಿಸುತ್ತಿದ್ದೇನೆ. ಇದರಲ್ಲಿ ಮೂರು ಕೆಲಸಗಳೂ ನನ್ನ ಪಾಲಿಗೆ ಬಂದಿವೆ. ಕೆಲಸ ಮಾಡಬೇಕು ಎನ್ನುವ ಉತ್ಸಾಹವೇ ಈ ಎಲ್ಲವನ್ನೂ ಮಾಡುವ ಶಕ್ತಿಯನ್ನು ತುಂಬಿದೆ. ಇದಕ್ಕೆ ನಮ್ಮ ತಂಡದ ಬೆಂಬಲ ಹೆಚ್ಚು ನೆರವಾಗುತ್ತದೆ. ನಿರ್ಮಾಣ ಮಾಡಬೇಕು ಎನ್ನುವ ಕನಸು ನನಗೆ ಮೊದಲಿನಿಂದ ಇತ್ತು. ಇದೇ ಮೊದಲ ನಿರ್ಮಾಣ ಏನಲ್ಲ. ಈ ಹಿಂದೆ 'ರಕ್ಷಾಬಂಧನ' ನಿರ್ಮಿಸಿದ್ದೆ. ಅದಕ್ಕೂ ಮೊದಲು ಕೆಲವೊಂದು ಕಾರ್ಯಕ್ರಮಗಳನ್ನು ನಿರ್ಮಾಣ ಮಾಡುತ್ತಿದ್ದೆ. ಕೆಲಸ ಅಂದಮೇಲೆ ಒತ್ತಡ ಇದ್ದೇ ಇರುತ್ತದೆ. ಅದರ ಹೊರೆಯಾಗದಂತೆ ಸಹಾಯ ಮಾಡುವ ತಂಡ ನನಗೆ ಸಿಕ್ಕಿದೆ. ಹದಿನಾರು ವರ್ಷದಿಂದ ನಟನೆ ಮಾಡುತ್ತಿದ್ದೇನೆ. ಅದರಿಂದ ಒಂದಿಷ್ಟು ಅನುಭವವನ್ನು ಪಡೆದಿದ್ದೇನೆ. ನಟನೆಗೆ ನಿಂತರೆ ನನ್ನ ಎಲ್ಲ ಕೆಲಸಗಳನ್ನು ಮರೆತು ತೊಡಗುತ್ತೇನೆ.

◆ **ಕಿರುತೆರೆಗೆ ನಿಮ್ಮ ಪ್ರವೇಶ ಆಗಿದ್ದು ಹೇಗೆ?**

ನನಗೆ ಆಗ 16 ವರ್ಷ. ಆ ಸಮಯದಲ್ಲಿ 'ಜೋಶ್' ಸಿನಿಮಾ ಮಾಡಿದೆ. ಅದಕ್ಕೆ 12 ಸಾವಿರ ಜನ ಆಡಿಷನ್ ನೀಡಿದ್ದರು. ಅದರಲ್ಲಿ ನಾವು ಐದು ಮಂದಿ ಮಾತ್ರ ಆಯ್ಕೆ ಆಗಿದ್ದೆವು. 'ಜೋಶ್' ಸಿನಿಮಾ ನನ್ನ ಮೊದಲ ಹೆಜ್ಜೆ. ಅದಾದ ಮೇಲೆ ಈ ವೃತ್ತಿ ಆಗಲ್ಲ ಎಂದು ಕೈ ಬಿಟ್ಟಿದ್ದೆ. ಅದೇ ಸಮಯದಲ್ಲಿ ನಿರ್ದೇಶಕ ಶಿವಮಣಿ ಅವರು ಪುನಃ ನನ್ನನ್ನು ಕರೆದು 'ಕ್ಲಾಸ್‌ಮೇಟ್' ಎಂಬ ಧಾರಾವಾಹಿಯಲ್ಲಿ ಒಂದು ಪಾತ್ರವನ್ನು ಕೊಟ್ಟರು. ಆ ಧಾರಾವಾಹಿಯಿಂದ ಕಿರುತೆರೆಗೆ ಬಂದೆ. ಇದು ಹದಿಮೂರನೆಯ ಧಾರಾವಾಹಿ. ಈಗ ಇದೇ ಪ್ಯಾಶನ್, ವೃತ್ತಿ, ಬದುಕು ಎಲ್ಲ ಆಗಿದೆ.

ನಮ್ಮ ಕುಟುಂಬಕ್ಕೆ ಕಲೆಯ ಹಿನ್ನೆಲೆ ಏನಿಲ್ಲ. ಕಾಲೇಜು ದಿನಗಳಲ್ಲಿ ಡಾನ್ಸ್ ಮಾಡುತ್ತಿದ್ದೆ. ಶಿವು ಅಂತ ಪತ್ರಕರ್ತರೊಬ್ಬರು ನಮ್ಮ ಕುಟುಂಬದ ಆತ್ಮೀಯರು. ಅವರು ಆಡಿಷನ್ ಬಗ್ಗೆ ಹೇಳಿದರು. ಮಾತ್ರವಲ್ಲ ಅವರೇ ನನ್ನನ್ನು ಕರೆದುಕೊಂಡು ಹೋಗಿ ಮೊದಲ ಆಡಿಷನ್ ಮಾಡಿಸಿದ್ದರು. ಇವತ್ತು ಅವರು ಇಲ್ಲ, ಈ ಕ್ಷೇತ್ರಕ್ಕೆ ಬರಲು ಅವರೇ ಕಾರಣ ಎನ್ನುವುದು ಮರೆಯುವಂತಿಲ್ಲ.

◆ **ವ್ಯಕ್ತಿಯಾಗಿ ಸಾಮಾಜಿಕ ಜವಾಬ್ದಾರಿಯನ್ನು ಹೇಗೆ ನಿರ್ವಹಣೆ ಮಾಡಬಹುದು?**

ಒಬ್ಬ ನಟನಾಗಿ ಸಮಾಜಮುಖಿ ಆಗಿರುತ್ತೇವೆ. ನಮ್ಮ ಎಲ್ಲ ಕ್ರಿಯೆ–ಚಟುವಟಿಕೆಗಳನ್ನು ಯಾರಾದರೂ ಗಮನಿಸುತ್ತಲೇ ಇರುತ್ತಾರೆ. ನನ್ನಿಂದ ಕಲಿಯುತ್ತಾರೆ ಎಂದು ನನಗೆ ಅನಿಸುವುದಿಲ್ಲ. ಕಲಿಸುವಷ್ಟು ದೊಡ್ಡ ವ್ಯಕ್ತಿ ನಾನಲ್ಲ. ನಾನೇ ಬೇರೆಯವರಿಂದ ಕಲಿಯುತ್ತಿದ್ದೇನೆ. ಯಾರ ಹತ್ತಿರ ಹೇಗೆ ಇರಬೇಕು ಎನ್ನುವುದನ್ನು ನನ್ನ ಪೋಷಕರು ಕಲಿಸಿದ್ದಾರೆ. ಯಾರ ಬಳಿ ಏನು ಮಾತನಾಡಬೇಕು ಎನ್ನುವ ಜವಾಬ್ದಾರಿ ಇದೆ. ನನ್ನಿಂದ ಯಾರಿಗೂ ನೋವು ಉಂಟಾಗಬಾರದು ಎನ್ನುವ ಪ್ರಜ್ಞೆ ಇದೆ.

◆ **ಯಾವುದೋ ಒಂದು ಕತೆ ಸಿಕ್ಕರೆ ಅದನ್ನು ಯಾವ ದೃಷ್ಟಿಯಿಂದ ನೋಡುತ್ತೀರಿ?**

ಒಂದು ಪಾತ್ರಕ್ಕೆ ನಾನು ಸೂಕ್ತ ಆಗಬಹುದು ಎಂದು ಯಾರೇ ಕರೆದರೂ ಅದಕ್ಕೆ ಕೃತಜ್ಞನಾಗಿರುತ್ತೇನೆ. ಪಾತ್ರ ಏನು ಅನ್ನುವುದನ್ನು ತಿಳಿದುಕೊಳ್ಳುತ್ತೇನೆ. ಇದನ್ನೇ ಮಾಡಬೇಕು, ಅದನ್ನೇ ಮಾಡಬೇಕು ಎನ್ನುವ ಕನಸುಗಳೇನೂ ಇಲ್ಲ. ಪಾತ್ರದ ಮೂಲಕ ಅದರ ಆಳ ಅಗಲವನ್ನು ನೋಡುತ್ತೇನೆ. ಅದು ನನಗೆ ಯಾವ ರೀತಿ ಸಹಾಯ ಮಾಡುತ್ತದೆ ಎಂದು ತಿಳಿದುಕೊಳ್ಳುತ್ತೇನೆ. ಯಾವುದೇ ಕೆಲಸ ಇದ್ದರೂ ಅದು ಮತ್ತೊಂದು ಕೆಲಸದ ಮೆಟ್ಟಿಲಂತೆ ಆಗಿದೆ. ಈ ತನಕ ಹಾಗೆಯೇ ಮಾಡಿದ್ದೇನೆ. ಟೀವಿಯಲ್ಲಿ ನಿರೂಪಕನಾಗಿದ್ದೆ, ಡಾನ್ಸಿಂಗ್ ಸ್ಟಾರ್‌ನಲ್ಲಿ ಒಳ್ಳೆಯ ನೃತ್ಯವನ್ನು ಪ್ರದರ್ಶನ ಮಾಡಿದ್ದೆ. 'ಬಿಗ್‌ಬಾಸ್'ನಲ್ಲಿ ಇದ್ದೆ. ಅಲ್ಲಿಂದ ಹೊರಬಂದ ನಂತರ ಟೀವಿ ಕಾರ್ಯಕ್ರಮಗಳ ನಿರ್ಮಿಸಲು ಆರಂಭಿಸಿದೆ. ನಂತರ ನಟನೆಯನ್ನು ಮಾಡುತ್ತಿದ್ದೇನೆ. ಪ್ರತಿ ಸಂದರ್ಭದಲ್ಲೂ ಒಂದು ಹಂತ ಮೇಲೆ ಏರುತ್ತಿದ್ದೇನೆ ಎಂದು ಅನಿಸುತ್ತದೆ. ಹಾಗಾಗಿ ಬೆಳವಣಿಗೆಗೆ ಸಹಕಾರಿ ಆಗುವ ಪಾತ್ರ ಸಿಕ್ಕರೆ ಖಂಡಿತ ಮಾಡುತ್ತೇನೆ. ನಿರ್ದೇಶನದಲ್ಲೂ ಕೆಲಸ ಮಾಡಿದ್ದರಿಂದ ಕಥೆಯ ಬಗ್ಗೆ ಯೋಚಿಸಿಯೇ ತೀರ್ಮಾನ ಮಾಡುತ್ತೇನೆ.

◆ **ನಿಮಗೆ ಜನಪ್ರಿಯತೆಯನ್ನು ನೀಡಿದ ಧಾರಾವಾಹಿಗಳು ಯಾವುವು?**

'ಬಂಗಾರ' ಧಾರಾವಾಹಿ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಮನೆ ಮಾತಾದೆ. ಅದರಲ್ಲಿ ಕಬ್ಬಡಿ ಪಟು (ವಿಜಯಕುಮಾರ್) ಆಗಿದ್ದೆ. ಅದೇ ಹೆಸರಿನಿಂದ ಈಗಲೂ ಅನೇಕ ಹಳ್ಳಿಗಳಲ್ಲಿ ನನ್ನನ್ನು ಗುರುತಿಸುತ್ತಾರೆ. ನಂತರ 'ಪುನರ್‌ವಿವಾಹ'ದಲ್ಲಿ ಮಾಡಿದೆ. ಅದು ನನ್ನಲ್ಲಿ ಸಂಪೂರ್ಣ ಬದಲಾವಣೆಯನ್ನು ಮಾಡಿತು. ಜೊತೆಗೆ ನಾನೂ ನಿರ್ಮಾಣ ಮಾಡಬೇಕು ಎನ್ನುವ ಬಯಕೆಯನ್ನು ಹುಟ್ಟಿಸಿತು. ಅದೇ ಕನಸಿನ ಬೀಜ 'ಗಾಂಧಾರಿ'ಯಲ್ಲಿ ಮೊಳಕೆಯೊಡೆಯಿತು. ಈಗ ಸದ್ಯ ಟೀವಿಯಲ್ಲೇ ಕೆಲಸ ಮಾಡುತ್ತಿದ್ದೇನೆ. ಮುಂದೆ ಸಿನಿಮಾ ಬಗ್ಗೆ ಯೋಚಿಸಬೇಕು.

■ **ರಾಘವೇಂದ್ರ ಕೆ.**